ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1884ನೇ ಇಸವೀ ಅರ್ಜೀ ನಂಬರ್ 91.

ಮೃತಪಟ್ಟ ಲಿಂಗಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕರೀಗೌಡ ಮೈನರ್, ಗಾರ್ಡಿಯರ್ ಮತ್ತು ತಂದೆ ಕರೀಗೌಡ, ಮೃತಪಟ್ಟ ಸದರೀ ಲಿಂಗಮ್ಮನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಸಕೆರೆ ಸ್ಥಳದ ಕರೀಗೌಡನು, ಸದರೀ ವಾಸಸ್ಥಳಾಗಿ ಮೃತಪಟ್ಟ ಸದರೀ ಲಿಂಗಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕರೀಗೌಡನ ಅರ್ಜೀಯನ್ನು 1884ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 7ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 99.

ಮೃತಪಟ್ಟ ಭದ್ರಕಾಳಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಾಜಿ ಬಕ್ಷಿ ಪುಟ್ಟಮಲ್ಲಪ್ಪ, ಮೃತಪಟ್ಟ ಸದರೀ ಭದ್ರಕಾಳಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಪುಟ್ಟಮಲ್ಲಪ್ಪನವರು, ಸದರೀ ವಾಸಸ್ಥಳಾಗಿ ಮೃತಪಟ್ಟ ಭದ್ರಕಾಳಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮಲ್ಲಪ್ಪನವರ ಅರ್ಜೀಯನ್ನು 1884ನೇ ಇಸವೀ ಜೂರ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭದ್ರಕಾಳಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 108.

ಮೃತಪಟ್ಟ ಪಂಡಿತ ಘುದ್ದಗಲ್ಲು ವ್ಯಾಸಾಚಾರ್ಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ ಮತ್ತು ತಾಯಿ ರಂಗೂಬಾಯಿ ಪುರಫ್ ರಮಾಬಾಯಿ, ಮೃತಪಟ್ಟ ಸದರೀ ವ್ಯಾಸಾಚಾರ್ಯರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ ಮತ್ತು ತಾಯಿ ರಂಗೂಬಾಯಿ ಪುರಫ್ ರಮಾಬಾಯಿ ಸದರೀ ವಾಸಸ್ಥನಾಗಿ ಮೃತಪಟ್ಟ ವ್ಯಾಸಾಚಾರ್ಯನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ ಮತ್ತು ತಾಯಿ ರಂಗೂಬಾಯಿ ಪುರಫ್ ರಮಾಬಾಯಿಯು ಅರ್ಜೀಯನ್ನು 1884ನೇ ಇಸವಿ ಜೂರ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವ್ಯಾಸಾಚಾರ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 109.

ಮೃತಪಟ್ಟ ರಂಗನಾಯಿಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವರದ, ಮೃತಪಟ್ಟ ಸದರೀ ರಂಗನಾಯಿಕನಿಗೆ ಅಣ್ಣ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜ ನಗರದ ಸ್ಥಳದ ಸದರೀ ವರದನು ಸದರೀ ವಾಸಸ್ಥನಾಗಿ ಮೃತಪಟ್ಟ ರಂಗನಾಯಿಕನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದನ ಅರ್ಜೀಯನ್ನು 1884ನೇ ಇಸವಿ ಜೂ. ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗನಾಯಿಕನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಮಾರ್ಚಿ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎಸ್. ನರಸಿಮ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ.

ತಾರೀಖು 27ನೇ ಮಾಹೆ ಫಿಬ್ರವರೀ 1884ನೇ ಇಸವಿ, ಮೊಕ್ಕಾಂ ಹಿರೋಡೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಅತ್ತಿಕುಪ್ಪೆ ತಾಲ್ಲೂಕು ಕಿಕ್ಕೇರಿ ಸಬಾ ಗ್ರಾಮದಲ್ಲಿ ಇರುವ ಲೇಟ್ ತಾಲ್ಲೂಕು ಕಚೇರಿಯನ್ನು ಯಿಲ್ಲಿನ ಸಾಲ್ ಗುದಸ್ತೆ ಡಿಕಂಬರ್ 1ನೇ ಮಕ್ತುಂ 692–1032ನೇ ನಂಬರ್ ಹುಕ್ಕುಂ ಅನುಸರಿಸಿ, 1884ನೇ ಇಸವಿ ಏಸ್ರೆಲ್ 3ನೇ ದಿವಿ 11 ಘಂಟೆಗೆ ಕಿಕ್ಕೇರಿ ಮೊಕ್ಕಾಂನಲ್ಲಿ ಅತ್ತಿಕುಪ್ಪೆ ತಾಲ್ಲೂಕು ಆಮಿಲರ ಮೂಲಕ ಹರಾಜು ಮಾಡಿಸಲ್ಪಡುತ್ತೇಯಾಗಿ ಯಿಚ್ಛಿಸುವಳ್ಳ ಜನಗಳು ಆ ಕಾಲಕ್ಕೆ ಸದರೀ ಮೊಕ್ಕಾಮಿಗೆ ಹಾಜರಾಗಿ ಚಡ ದರಖಾಸ್ತು ಮಾಡಿ ಪಡಿಯಬಹುದು.

ಚಡ ದರಖಾಸ್ತುದಾರನು ಹರಾಜು ಕಾಲದಲ್ಲಿ ದರಖಾಸ್ತು ಮೊಬಲಗು ಸೈಕಿ ಸೇಕಡಾ 25 ರೂಪಾಯಿ ಪ್ರಕಾರ ತೇವಣೀ ಯಿಡಬೇಕು. ಹರಾಜು ಆದ 15 ದಿವಸದ ಒಳಗೆ ಕ್ರಯ ಮೊಬಲಗು ಪೂರಾ ಪಾವತೀ ಮಾಡಬೇಕು. ತಪ್ಪಿದಲ್ಲಿ ತೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳುವದು ಹೊರ್ತು ಹರಾಜಾದ ಸೊತ್ತನ್ನು ಪುನಹಾ ವಿಕ್ರಯಿಸಿ ಅದರಿಂದ ಪುಂಟುಗುವ ನಷ್ಟಕ್ಕೆ ಮೊದಲ ಚಡ ದರಖಾಸ್ತುದಾರನನ್ನು ಗರಿಪಡಿಸಲ್ಪಡುತ್ತೆ.

ಆಮಿಲರವರಿಂದ ಮಾಡಿಸಲ್ಪಟ್ಟ ಹರಾಜ್ ಯಿಲ್ಲಿಂದ ಕರ್ಚಫರಂ ಅದಕೂಡ್ಲೆ ಹರಾಜು ಆದ ಸೊತ್ತನ್ನು ಚಡ ದರಖಾಸ್ತುದಾರನ ಸುಫರ್ದು ಮಾಡುತ್ತಾರೆ.

ಹರಾಜ್ ಸೊತ್ತಿನ ತಪಸೀಲ್ ವಗೈರೇ ಅತ್ತಿಕುಪ್ಪೆ ತಾಲ್ಲೂಕು ಆಮಿಲರಲ್ಲಿ ಹೋಗಿ ತಿಳಕೊಳ್ಳಬೇಕು.

ವಿ. ಪಿ. ಮಾಧವರಾವ್,
ಇನ್‌ಚಾರ್ಜ್ ಆಫೀಸರ್.

ತಾರೀಖು 15ನೇ ಮಾರ್ಚಿ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೋಡ್ಲು ನರಸಿಪುರ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಜೇಮಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಬ ಹಾಜರಾಗಿ ಅವನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ ಚಕ್ಟು 85ನೇ ಸೆಕ್ಷ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸದ ಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸದ ಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
4ನೇ ಬುಕ್ಕು ನಂಬರ್ 9 1881—82	ಚಾವರಾಜನಗರದ ತಾಲ್ಲೂಕು ಆಲೂರು ಗ್ರಾಮದ ಮುದ್ದುಕೃಷ್ಣಯ್ಯಂಗಾರ್ ಶ್ರೀವೈಷ್ಣವಜಾತಿ ಕೃಷಿಜೀವನ	ಚಾಮರಾಜನಗರ ತಾಲ್ಲೂಕು ಆಲೂರು ಕುಳು ವೆಂಗಟಯ್ಯನವರ ಮಗ ಕೃಷ್ಣಯ್ಯಂಗಾರ್ ಶ್ರೀವೈಷ್ಣವ ಜಾತಿ ಕೃಷಿ ಜೀವನ	3—2—82	3—2—82	400 ರೂಪಾಯಿನ ಭೂಸ್ಥಿತಿ ಅಧಾರ ಪತ್ರ.

ಅಬ್ದುಲ್‌ಖಾದರ್ ಕೆ. ಬಿ.,
ರಿಜಿಸ್ಟ್ರಾರ್.